ಅಲ್ಲಿನ ಸಾಮಾನ್ಯ ಜನರಿಗೆ ಭಾರತದ ಬಗ್ಗೆ ಬಹಳ ಕುತೂಹಲವಿದೆ. ನನಗೆ ಜನ 'ನಿಮ್ಮಲ್ಲಿ ಸಕ್ಕರೆಯ ಬೆಲೆಯೇನು, ಹಾಲಿನ ಧಾರಣೆಯೇನು, ಅಲ್ಲಿ ಏನೆಲ್ಲ ಸಿಗುತ್ತದೆ' ಎಂದು ಕೇಳುತ್ತಿದ್ದರು. ಅವರಲ್ಲಿ ಭಾರತದ ಬಗ್ಗೆ ತಿರಸ್ಕಾರವಾಗಲಿ ವೈರತ್ವವಾಗಲಿ ಇಲ್ಲ. ಭಾರತ ಪಾಕಿಸ್ತಾನಕ್ಕಿಂತ ಅಭಿವೃದ್ಧಿ ವಿಷಯದಲ್ಲಿ ಬಹಳ ಮುಂದಿದೆ. 60–70 ದಶಕದವರೆಗೆ ಅವರು ನಾವೇ ಮುಂದಿದ್ದೇವೆಂದು ಹೇಳುತ್ತಿದ್ದರು. ಸತ್ಯ ಅವರಿಗೂ ಗೊತ್ತಾಗಿದೆ. ನಮ್ಮ ಒಂದು ರೂಪಾಯಿ ಅವರ ಎರಡು ರೂಪಾಯಿಗೆ ಸಮ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಆರ್ಥಿಕವಾಗಿ ರಾಜಕೀಯವಾಗಿ ಅವರು ಬಹಳ ಕೆಳಗೆ ಹೋಗಿದ್ದಾರೆ. ನಮ್ಮ ಶಿಕ್ಷಣ, ಆರೋಗ್ಯವ್ಯವಸ್ಥೆ ಬಗ್ಗೆ ಅವರಿಗೆ ಗೌರವವಿದೆ.

- **ಅಲ್ಲಿನ ಬುದ್ಧಿಜೀವಿಗಳು, ಲೇಖಕರು?**

ಅವರೂ ಭಾರತದ ಜತೆ ಸ್ನೇಹ ಬಯಸುತ್ತಾರೆ. ಆದರೆ ಅಲ್ಲಿನ ಮಿಲಿಟರಿ ಇದನ್ನು ಬಯಸುವುದಿಲ್ಲ. ಅದಕ್ಕೆ ತನ್ನ ಅಸ್ತಿತ್ವದ ಪ್ರಶ್ನೆಯಿದೆ. ಅದನ್ನು ಅದು ಸುಲಭಕ್ಕೆ ಬಿಟ್ಟುಕೊಡುವುದಿಲ್ಲ.

- **ಅತಿ ಧಾರ್ಮಿಕತೆ ಮುಸ್ಲಿಂ ಸಮುದಾಯವನ್ನು ಮುಂದೆ ಹೋಗದಂತೆ ತಡೆದಿದೆ ಅನಿಸುವುದಿಲ್ಲವೇ?**

  ಜನ ಬಡತನದಲ್ಲಿ ಅನಕ್ಷರತೆಯಲ್ಲಿ ಕಷ್ಟದ ಬದುಕು ನಡೆಸುತ್ತಿದ್ದಾರೆ. ಆದರೆ ಮೌಲವಿಗಳು ಸ್ವರ್ಗದ ಹಾದಿ ತೋರಿಸುತ್ತಿದ್ದಾರೆ.

ಇದಕ್ಕೆ ದಾರಿಯೆಂದರೆ ಶಿಕ್ಷಣ. ಒಂದು ಸ್ವಾರಸ್ಯಕರ ಪ್ರಸಂಗವಿದೆ. ಒಬ್ಬ ಮೌಲವಿ ಒಬ್ಬ ತರುಣನಿಗೆ ಬಾಂಬು ಕಟ್ಟಿ ನಿನ್ನನ್ನು ಆಸ್ಫೋಟಿಸಿಕೊಂಡರೆ ಸೀದಾ ಸ್ವರ್ಗಕ್ಕೆ ಹೋಗುವೆ ಎಂದು ಹೇಳುತ್ತಾನೆ. 'ನೀವು ಸ್ವರ್ಗಕ್ಕೆ ಹೋಗುವುದಿಲ್ಲವೇ?' ಎಂದು ತರುಣ ಕೇಳುತ್ತಾನೆ. ಮೌಲವಿ ಹೇಳುತ್ತಾನೆ: 'ನನಗೆ ಕರೆಬಂದಾಗ ಹೋಗುವೆ'. ಆಗ ತರುಣ 'ನಾನೂ ನನಗೆ ಕರೆಬಂದಾಗ ಹೋಗುವೆ' ಎಂದು ಕಟ್ಟಿದ್ದ ಬೆಲ್ಟನ್ನು ಬಿಚ್ಚಿಕೊಡುತ್ತಾನೆ. ಇಂಥ ಎಚ್ಚರ ಜನರಲ್ಲಿ ಬರಬೇಕಿದೆ. ಸಾಹಿತ್ಯ, ಸಂಗೀತ, ಥಿಯೇಟರ್, ಚಿತ್ರಕಲೆಗಳ ಉದ್ದೇಶವೇ ಈ ಬಗೆಯ ಎಚ್ಚರ ಕೊಡುವುದು. ಸಂವೇದನೆಯನ್ನು ಸೂಕ್ಷ್ಮಗೊಳಿಸುವುದು. ಇದು ಸಮಾಜದಲ್ಲಿ ಎಷ್ಟು ಹೆಚ್ಚಾಗುತ್ತದೆಯೊ ಅಷ್ಟು ಒಳ್ಳೆಯದು.

- **ಈ ಬಗೆಯ ಕಲೆಗಳಿಗೆ ತೆರೆದುಕೊಂಡಿರದ ಸಾಮಾನ್ಯ ಜನರು ಶಿಕ್ಷಿತರಿಗಿಂತ ಹೆಚ್ಚು ಸಂವೇದನಾಶೀಲರಾಗಿರಬಹುದು.**

ನೀವು ಹೇಳುವ ಸಾಮಾನ್ಯ ಜನ ಕೂಡ ಜಾನಪದಲ್ಲಿರುವ ಸಾಹಿತ್ಯ ಸಂಗೀತ ರಂಗಭೂಮಿಗೆ ತೆರೆದುಕೊಂಡವರು ತಾನೆ. ಅವುಗಳಿಂದ ತಮ್ಮ ಸಂವೇದನಾಶೀಲತೆ ಅವರು ಪಡೆಯುತ್ತಿರಬಹುದು.

- **ಮುಸ್ಲಿಂ ಸಮಾಜದಲ್ಲಿ ಬುದ್ಧಿಜೀವಿಗಳನ್ನು ಧರ್ಮವಿರೋಧಿಗಳು ಎಂದು ಗ್ರಹಿಸುವ ಸನ್ನಿವೇಶವಿದೆ. ಇಸ್ಲಾಮಿಕ್ ದೇಶಗಳಲ್ಲಿ ಅವರನ್ನು ನಾಸ್ತಿಕರು ಎಂದು ಕೊಂದು ಹಾಕುವ ಸುದ್ದಿಗಳು ಬರುತ್ತಿವೆ. ಸಮಾಜವೇ ಹಾಳಗಿದೆಯೊ ಬುದ್ಧಿಜೀವಿಗಳು ಸಮಾಜದ ಸಾವಯವ ಭಾಗವಾಗಿಲ್ಲವೊ?**

ಓದು ಬರೆಹ ಮಾಡಿದವರ ಸಮಸ್ಯೆಯೆಂದರೆ, ಅವರು ತಮ್ಮದೇ ಲೋಕವನ್ನು ಕಟ್ಟಿಕೊಂಡು ವಾಸಮಾಡುತ್ತಿರುವುದು. ನಿಮ್ಮ ಸ್ನೇಹ ಯಾವುದಾದರೂ ಒಬ್ಬ ಮುಸ್ಲಿಂ ಕಾರ್ಮಿಕನ ಜತೆ, ರೈತನ ಜತೆ, ಕಸುಬುದಾರನ ಜತೆ ಇದೆಯೇ? ಎಂದು ನಾನು ಕೇಳುತ್ತೇನೆ. ನಿಮ್ಮ ಸ್ನೇಹ ಮುಸ್ಲಿಂ ಪ್ರೊಫೆಸರ್ ಜತೆ ಇದೆಯಾ ಎಂದರೆ ಹೌದೆನ್ನುತ್ತೀರಿ. ಶಿಕ್ಷಿತ ಜನರಾದ ನಾವು ನಮ್ಮ ವರ್ಗದ ನಮ್ಮ ಮನೋಭಾವದ ಜನರ ಜತೆ ಬದುಕುವ ಜೀವನ ಶೈಲಿ ಅಳವಡಿಸಿಕೊಂಡಿದ್ದೇವೆ. ನಮ್ಮ ಕೋಟೆ ಬಿಟ್ಟು ಹೊರಬರಬೇಕಿದೆ. ನೀವು ನಿಮ್ಮ ಹಳ್ಳಿಗೆ ಹೋಗಿ ಅಲ್ಲಿನ ಬಡಮುಸ್ಲಿಮರ ಜತೆ ಕೂತುಕೊಳ್ಳಿ. ಅವರ ಜತೆ ಮಾತಾಡಿ. ಅವರ ಸುಖದುಃಖ ಕೇಳಿಸಿಕೊಳ್ಳಿ. ಸರ್ ಸೈಯದ್ ಅಹಮದ್ ಶಿಕ್ಷಣಸಂಸ್ಥೆ ಕಟ್ಟುವಾಗ ಚಂದಾ ಸಂಗ್ರಹಿಸಲು ವೇಶ್ಯೆಯರ ಕೋಠಾಗಳಿಗೂ ಹೋದರು. ಈ ಬಗ್ಗೆ ಅವರಿಗೆ ನಾಚಿಕೆಯಿರಲಿಲ್ಲ. ನನ್ನ ಉದ್ದೇಶ ದೊಡ್ಡದಾಗಿದೆ. ಇದಕ್ಕಾಗಿ ನಾನು ಯಾರಿಂದಲೂ ಹಣ ಪಡೆಯಬಲ್ಲೆ ಎಂದು ಅವರು ಹೇಳುತ್ತಿದ್ದರು.